ಅ) ಪಶ್ಚಿಮ ಘಟ್ಟದ ಯಾವ ಯಾವ ಪ್ರದೇಶಗಳಲ್ಲಿ ಎಷ್ಟು ಎಕರೆ ಜಾಗದಲ್ಲಿ ಗಣಿಗಾರಿಕೆ ಅನುಮತಿ ನೀಡಲಾಗಿದೆ;

ಆ) ಗಣಿಗಾರಿಕೆಯನ್ನು ತಡೆಯಲು ಸರ್ಕಾರ ಏನು ಕ್ರಮ ಕೈಗೊಂಡಿದೆ? (ವಿವರ ನೀಡುವುದು)

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ) :—

ಅ) ಹೌದು. ಪಶ್ಚಿಮ ಘಟ್ಟದ ಪರ್ವತ ಶ್ರೇಣಿ ಪರಿಸರದಲ್ಲಿ ಹೊಸದಾಗಿ ಗಣಿಗಾರಿಕೆಗೆ ಅನುಮತಿ ನೀಡಬಾರದೆಂದು ಶಿಫಾರಸ್ಸು ಮಾಡಿದೆ.

ಆ) ಮೆ: ಕುದರೆಮುಖ ಕಬ್ಬಿಣ ಅದಿರು ಸಂಸ್ಥೆಗೆ ಆರೋಲಿ ಮತ್ತು ಮಲ್ಲೇಶ್ವರ ಗ್ರಾಮಗಳಲ್ಲಿ 4605 ಹೆಕ್ಟೇರ್ ಪ್ರದೇಶವನ್ನು 30 ವರ್ಷಗಳ ಅವಧಿಗೆ ದಿನಾಂಕ: 25-07-1969 ರಿಂದ ಅನ್ವಯವಾಗುವಂತೆ ಗಣಿ ಗುತ್ತಿಗೆ ನೀಡಲಾಗಿತ್ತು. ಅರಣ್ಯ ಇಲಾಖೆ ಪತ್ರ ದಿನಾಂಕ: 16-07-1999ರ ಅನ್ವಯ ದಿನಾಂಕ: 25-07-1999ರಿಂದ ಒಂದು ವರ್ಷದ ಅವಧಿಗೆ ಹಾಗೂ ದಿನಾಂಕ: 25-07-2000ದ ಪತ್ರದನ್ವಯ ದಿನಾಂಕ: 25-07-2000ರಿಂದ ಮತ್ತೊಂದು ವರ್ಷಕ್ಕೆ ತಾತ್ಕಾಲಿಕ ಅನುಮೋದನೆ ನೀಡಿದೆ.

ಇ) ಕರ್ನಾಟಕ ರಾಜ್ಯದ ಖನಿಜ ನೀತಿಯಂತೆ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಗಣಿಗಾರಿಕೆಗಾಗಿ ಯಾವುದೇ ಹೊಸ ಗಣಿ ಗುತ್ತಿಗೆಗಳನ್ನು ಮಂಜೂರು ಮಾಡುವುದಿಲ್ಲ.

ನರಗುಂದ ನಗರಕ್ಕೆ IDSMT ಯೋಜನೆ ಜಾರಿ

2708 (3423) ಶ್ರೀ ಬಿ.ಆರ್ ಯಾವಗಲ್ (ನರಗುಂದ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಐ.ಡಿ.ಎಸ್.ಎಂ.ಟಿ. ಯೋಜನೆಗಳು ಎಷ್ಟು ನಗರಗಳಲ್ಲಿ ಜಾರಿಗೊಳಿಲಾಗಿದೆ.

ಆ) ಉಳಿದ ನಗರಗಳಿಗೆ ಎಂದಿನಿಂದ ಈ ಯೋಜನೆಗಳನ್ನು ಮಂಜೂರು ಮಾಡಲಾಗುವುದು;

ಇ) ಮಂಜೂರು ಮಾಡುವಾಗ ಯಾವ ಮಾನದಂಡವನ್ನು ಅನುಸರಿಸಲಾಗುವುದು;

ಈ) ನರಗುಂದ ನಗರಕ್ಕೆ ಈ ಯೋಜನೆಯನ್ನು ಮಂಜೂರು ಮಾಡುವುದು ಯಾವಾಗ.

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :—

ಅ) 85 ಪಟ್ಟಣಗಳಿಗೆ ಜಾರಿಗೊಳಿಸಲಾಗಿದೆ.

ಆ) ಹಂತ ಹಂತವಾಗಿ ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಅನುಮೋದನೆ ನೀಡಿದ ನಂತರ ಉಳಿದ ನಗರಗಳಿಗೂ ಯೋಜನೆಗಳನ್ನು ಮಂಜೂರು ಮಾಡಲಾಗುವುದು.

ಇ) ನಗರ ಸ್ಥಳೀಯ ಸಂಸ್ಥೆಗಳಲ್ಲಿ 5 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪಟ್ಟಣಗಳನ್ನು ಆಯ್ಕೆ ಮಾಡಲಾಗುವುದು ಹಾಗೂ ಪಟ್ಟಣಗಳ ಸಮಗ್ರ ಅಭಿವೃದ್ಧಿ ಯೋಜನೆಯಡಿ ರಾಜ್ಯ ಸರ್ಕಾರವು ಪಟ್ಟಣಗಳನ್ನು ಆಯ್ಕೆ ಮಾಡಲಾಗುವುದು.

ಈ) ನರಗುಂದ ಪಟ್ಟಣವನ್ನು ಐ.ಡಿ.ಎಸ್.ಎಂ.ಟಿ. ಯೋಜನೆಯಡಿ ರಾಜ್ಯ ಮಟ್ಟದ ಮಂಜೂರಾತಿ ಸಮಿತಿ ಈವರೆಗೂ ಆಯ್ಕೆ ಆಗಿರುವುದಿಲ್ಲ. ರಾಜ್ಯ ಮಟ್ಟದ ಮಂಜೂರಾತಿ ಸಮಿತಿ ಆಯ್ಕೆ ಮಾಡಿ ಕೇಂದ್ರ ಸರ್ಕಾರವು ಅನುಮೋದನೆ ನೀಡಿದ ನಂತರ ನರಗುಂದ ನಗರಕ್ಕೆ ಈ ಯೋಜನೆಯನ್ನು ಮಂಜೂರು ಮಾಡಲಾಗುವುದು.

ಪೋಸ್ಟ್ ಮೆಟ್ರಿಕ್ ಹಾಸ್ಟೆಲ್ ಪ್ರಾರಂಭಿಸುವುದು

2709 (3425) ಶ್ರೀ ಯಾವಗಲ್ ಬಿ.ಆರ್ (ನರಗುಂದ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪೋಸ್ಟ್ ಮೆಟ್ರಿಕ್ ಹಾಸ್ಟೆಲ್‌ಗಳನ್ನು ಮಂಜೂರು ಮಾಡುವಾಗ ಯಾವ ಅಂಶಗಳನ್ನು ಸರ್ಕಾರ ಗಣನೆಗೆ ತೆಗದುಕೊಳ್ಳುವುದು;

ಆ) ರಾಜ್ಯದಲ್ಲಿ ಪೋಸ್ಟ್ ಮೆಟ್ರಿಕ್ ಹಾಸ್ಟೆಲ್‌ಗಳು ಮಂಜೂರು ಮಾಡಲಾಗಿದೆಯೆ;

ಇ) ನರಗುಂದ ನಗರಕ್ಕೆ ಪೋಸ್ಟ್ ಮೆಟ್ರಿಕ್ ಹಾಸ್ಟೆಲ್ ಮಂಜೂರು ಮಾಡುವ ವಿಚಾರ ಸರ್ಕಾರಕ್ಕೆ ಇದೆಯೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡುವಾಗ ಕೆಳಕಂಡ ಅಂಶಗಳನ್ನು ಸರ್ಕಾರ ಗಣನೆಗೆ ತೆಗದುಕೊಳ್ಳಲಾಗುತ್ತಿದೆ.

1) ಮಂಜೂರು ಮಾಡುವ ಸ್ಥಳದಲ್ಲಿ ಸಾಕಷ್ಟು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿರಬೇಕು.